**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ**

**ಸಿಸಿ ನಂ ಃ 205/2021**
**ಸಿಡಬ್ಲು ಃ 3**
**ಪಿಡಬ್ಲು ಃ 1**

**ಹೆಸರು** ಃ ಮಾರುತಿ ಸತ್ಯಪ್ಪ ಜೋರ್ಲಿ
**ವಯಾ** ಃ 50 ವರ್ಷ
**ಉದ್ಯೋಗ** ಃ ಒಕ್ಕಲುತನ
**ವಾಸ** ಃ ಕರಗುಪ್ಪಿ ತಾಃ ಹುಕ್ಕೇರಿ

**(ದಿನಾಂಕಃ 02-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ ಃ ಸಸಅಃರವರಿಂದ ಸರಕಾರದ ಪರವಾಗಿ ಃ**

ಚಾಸಾ-2 ರವರ ಪರಿಚಯ ಇರುವುದಿಲ್ಲ. ಈಗ ಸುವುರು 5-6 ವರ್ಷಗಳ ಹಿಂದೆ ಕರಗುಪ್ಪಿ ಬಸ್ ನಿಲ್ದಾಣದ ಹತ್ತಿರ ಪೋಲಿಸರು ನನ್ನ ಹೆಬ್ಬೆಟ್ಟು ಒತ್ತಿಸಿಕೊಂಡಿರುತ್ತಾರೆ. ಸಾಕ್ಷಿಗೆ ದಾಳಿ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ.ಪಿ-1, ಕಚ್ಚಾ ನಕಾಶೆ ನಿ.ಪಿ-2 ಎಂದು ಗುರುತಿಸಲಾಯಿತು. ನಿ.ಪಿ-1 ಮತ್ತು 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಸಹಿ ಮಾಡು ಎಂದಿದ್ದಕ್ಕೆ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ.

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟಿ ಸವಾಲುಃ ಮಾನ್ಯ ಎಪಿಪಿ ಅವರಿಂದ -**

ದಿನಾಂಕ 15-05-2013 ರಂದು ವಿಶೇಷ ಅಲಾನಿ ದಳ ಗೋಕಾಕ ಇವರು ನನ್ನನ್ನು ಮತ್ತು ಚಾಸಾ-2 ರವರನ್ನು ಕರೆಸಿ ಬಸ್ಸಾಪೂರ ಗ್ರಾಮದಲ್ಲಿ ಶಿವನವ್ವ ಮಾರುತಿ ಗುರವ ಎಂಬುವವರು ಸರ್ಕಾರಿ ಕನ್ನಡ ಶಾಲೆಯ ಹತ್ತಿರ ಸಾರ್ವಜನಿಕ ರಸೆತಯಲ್ಲಿ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಾಳೆ ಎಂದು ಮಾಹಿತಿ ತಿಳಿಸಿ ದಾಳಿ ಮಾಡಲು ನಮಂನ್ನು ಪಂಚರಾಗಲು ಸಹಕರಿಸಲು ಕೋರಿದ್ದು ನಾವು ಒಪ್ಪಿ ಪೋಲಿಸರ ಜೊತೆಗೆ ಸ್ಥಳಕ್ಕೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಬಸ್ಸಾಪೂರ ಗ್ರಾಮದ ಬಸ್ ನಿಲ್ದಾಣದ ಹತ್ತಿರ ವಾಚ್ ಮಾಡುತ್ತಿರುವಾಗ ಒಬ್ಬ ರಬ್ಬರ ಟ್ಯೂಬಿನ್ನು ಇಟ್ಟುಕೊಂಡು ಸಂಶಯಾಸ್ಪದವಾಗಿ ಅಡ್ಡಾಡುತ್ತ

ಇರುವಾಗ ಅವಳ ಹತ್ತಿರ ಕೆಲವು ಜನರು ನಿಂತಿದ್ದರು ಎಂದರೆ ಸರಿಯಲ್ಲ. ಪೋಲಿಸರು ಮತ್ತು ನಾವು ದಾಳಿ ಮಾಡಲಾಗಿ ಅಲ್ಲಿದ್ದ ಜನರು ಓಡಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಮಹಿಳಾ ಪೋಲಿಸ ಪೇದೆ ಸಹಾಯದಿಂದ ಅವಳನ್ನು ಹಿಡಿದು ವಿಚಾರಿಸಲಾಗಿ ಅವಳ ಹೆಸರು ಶಿವನವ್ವ ಮಾರುತಿ ಗುರವ ಸಾಃ ಬಸ್ಸಾಪೂರ ಎಂದು ತಿಳಿಸಿರುತ್ತಾಳೆ ಎಂದರೆ ಸರಿಯಲ್ಲ. ರಬ್ಬರ ಟ್ಯೂಬನ ಬಾಯಿ ತೆಗೆದು ಮೂಸಿ ಚೆಕ್ ಮಾಡಲಾಗಿ ಘಾಟು ವಾಸನೆ ಬಂದಿದ್ದು ಕಳ್ಳಭಟ್ಟಿ ಸಾರಾಯಿ ಇದ್ದ ಬಗ್ಗೆ ಖಾತ್ರಿ ಪಡಿಸಿಕೊಂಡು ಅದನ್ನು ಎಲ್ಲಿಂದ ತಂದಿರುವಿ ಎಂದು ಕೇಳಲಾಗಿ ಸಮರ್ಪಕ ಉತ್ತರ ಕೊಡದೇ ಇದ್ದುದರಿಂದ 2-30 ಗಂಟೆಗೆ ಸದ್ರಿ ಮಹಿಳೆಯನ್ನು ದಸ್ತಗೀರ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಒಂದು ರಬ್ಬರ ಟ್ಯೂಬಿನಲ್ಲಿ 30 ಲೀಟರನಷ್ಟು ಕಳ್ಳಭಟ್ಟಿ ಸಾರಾಯಿ ಇದ್ದು ಅದರಿಂದ 180 ಮಿಲಿಯ ಬಾಟಲನಷ್ಟು ಕಳ್ಳಭಟ್ಟಿ ಸಾರಾಯಿ ಸ್ಯಾಂಪಲ ತೆಗೆದು ಅರಗಿನಿಂದ ಶೀಲು ಮಾಡಿ ನಮ್ಮ ಸಹಿ ಇರುವ ಚೀಟಿ ಅಂಟಿಸಲಾಯಿತು ಎಂದರೆ ಸರಿಯಲ್ಲ. ನಂತರ ಪಂಚನಾಮೆ , ಕಚ್ಚಾ ನಕಾಶೆ ಬರೆದು ನನ್ನ ಮತ್ತು ಚಾಸಾ-2 ರವರ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-1 ಮತ್ತು 2 ರಿಲ್ಲಿರುವ ಎಲ್ಲ ವಿಚಾರ ಗೊತಿತದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ -**

ಇರುವುದಿಲ್ಲ.

**ಮರುವಿಚಾರಣೆ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೆ ಕೇ ಸರಿ ಅದೇ**

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**